**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.227/2022

**PW**. 8

**CW**. 10

**ಸಾಕ್ಷಿಯ ಹೆಸರು –ಷಣ್ಮುಖ**

**ತಂದೆಯ ಹೆಸರು –ನಂಜೇಗೌಡ**

**ವಯಸ್ಸು –42 ವರ್ಷಗಳು**

ದಿನಾಂಕ 02–08–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಹುಣಸೇಕೊಪ್ಪಲು ಗ್ರಾಮ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಈಗ್ಗೆ 4 ವರ್ಷಗಳ ಹಿಂದೆ ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ , ಪೊಲೀಸರು ಒಂದು ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ– ಸರ್ಕಾರಿ ಅಭಿಯೋಜಕರಿಂದಃ–**

ದಿಃ 03–03–2020 ರಂದು ಬೆಳಗ್ಗೆ 9.00 ರಿಂದ 1.00 ಗಂಟೆಯವರೆಗೆ ಬೆಟ್ಟದಪುರ ಸಿಡಿಲು ಮಲ್ಲಿಕಾರ್ಜುನ ಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿ ಕೃಷಿ ಕಛೇರಿಯ ಮುಂಭಾಗ

ಆರೋಪಿತಳು ಚಾಸಾ–2 ರವರಿಗೆ ಚಾಕುವಿನಿಂದ ಕೊಲೆ ಮಾಡಲು ಪ್ರಯತ್ನಪಟ್ಟ ವಿಚಾರದಲ್ಲಿ ಪೊಲೀಸರು ಮಹಜರ್ ಮಾಡಿ, ರಕ್ತದ ಕಲೆಯಿರುವ ಟಾರು ಮಿಶ್ರಿತ ಮಣ್ಣು, ಸಾದಾ ಟಾರು ಮಣ್ಣು , ಒಂ ದು ಮೋಟರ್ ಸೈಕಲ್, ಬೈಕ್ ಮೇಲೆ ಬಿದ್ದ ರಕ್ತವನ್ನು, ಒಂದು ಜರ್ಕಿನ ಅನ್ನು , ಸ್ಥಳದಲ್ಲಿ ಒಂದು ವಾಚ್ ಅನ್ನು, ರಕ್ತಕಲೆಯಿರುವ ಸಿಮೆಂಟ್ ಗಾರೆ ಹಾಗೂ ಸಾದಾ ಸಿಮೆಂಟ್ ಗಾರೆಗಳನ್ನು ವಶಪಡಿಸಿಕೊಂಡು, ಜಪ್ತಿ ಮಾಡಿ, ನಮ್ಮ ಸಹಿಯಿರುವ ಚೀಟಿಯನ್ನು ಅಂಟಿಸಿ ,ನಿಪಿ–2 ರಂತೆ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 6 ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ–5 ರಿದ 8 ಎಂದು ಗುರುತಿಸಲಾಗಿದೆ. ಸದರಿ ಎಲ್ಲ ವಸ್ತುಗಳು ನ್ಯಾಯಾಲಯದ ಮುಂದೆ ಇರುವ ವಸ್ತುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಿಪಿ–2 ರಂತೆ ಮತ್ತು ಮುದ್ದೆಮಾಲುಗಳ ಬಗ್ಗೆ ಎಲ್ಲ ಮಾಹಿತಿ ಇದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್. ಪಿ ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.